<u>ದಿನಾಂಕಃ**03-07-2024** ರಂದು ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ **3** ನೇ ಆರೋಪಿ ಪರಃ ಶ್ರೀ ಎ.ಎಂ.ಕೆ. ವಕೀಲರಿಂದಃ-</u>

ನನಗೆ ಮಾಹಿತಿ ಬಂದಾಗ ಆ ದಿನ ಮಧ್ಯಾಹ್ನಃ**03.00** ಗಂಟೆ ಆಗಿತ್ತು. ಘಟನೆ ನಡೆಯಿತು ಎನ್ನಲಾದ ಸ್ಥಳಕ್ಕೆ ನಮ್ಮ ಠಾಣೆಯಿಂದ ಸುಮಾರು **5** ರಿಂದ **10** ನಿಮಿಷದ ಒಳಗಡೆ ಹೋಗಬಹುದು ಎಂದರೆ ಸಾಕ್ಷಿ ಅಲ್ಲಿಗೆ ಹೋಗಲು ಸುಮಾರು **15** ನಿಮಿಷ ಬೇಕು ಎನ್ನುತ್ತಾರೆ. ನಾವು ಘಟನಾ ಸ್ಥಳಕ್ಕೆ ಹೋದಾಗ ಸಂಜೆಃ**05.10** ಗಂಟೆ ಆಗಿತ್ತು. ಪತ್ರಾಂಕಿತ ಅಧಿಕಾರಿಗೆ ಮನವಿ ಕೊಟ್ಟ ಕಾಲಕ್ಕೆ ಮಧ್ಯಾಹ್ನಃ**03.30** ಗಂಟೆ ಆಗಿತ್ತು. ಪತ್ರಾಂಕಿತ ಅಧಿಕಾರಿಗೆ ಮನವಿಯನ್ನ ನನ್ನ ಸಿಬ್ಬಂದಿ ಮುಖಾಂತರ ಕಳುಹಿಸಿದೆ. ಪತ್ರಾಂಕಿತ ಅಧಿಕಾರಿ ನಿಮ್ಮ ಸಿಬ್ಬಂದಿ ಜೊತೆಯೇ ಠಾಣೆಗೆ ಹಾಜರಾದರಾ ಎಂದರೆ ಸಾಕ್ಷಿ ಅದು ಈಗ ನೆನಪಿಲ್ಲ ಆದರೆ ಸಂಜೆಃ**04.00** ಗಂಟೆಗೆ ಪತ್ರಾಂಕಿತ ಅಧಿಕಾರಿ ಮತ್ತು ಪಂಚಸಾಕ್ಷಿಗಳು ನಮ್ಮ ಠಾಣೆಗೆ ಹಾಜರಾದರು ಎನ್ನುತ್ತಾರೆ. ಪತ್ರಾಂಕಿತ ಅಧಿಕಾರಿ ಮತ್ತು ಪಂಚಸಾಕ್ಷಿಗಳು ಐ.ಡಿ.ಎಸ್.ಜಿ. ಕಾಲೇಜಿನ ಉಪ-ಪ್ರಾಂಶುಪಾಲರು, ಎಸ್.ಡಿ.ಎ ಮತ್ತು ಡಿ.ಗ್ರೂಪ್ ನೌಕರರು. ಘಟನಾ ಸ್ಥಳಕ್ಕೆ ತಲುಪಿದೆವು ಎಂದು ಹೇಳಲಾದ ನಂತರ ನೀವು ಮತ್ತು ನಿಮ್ಮ ಸಿಬ್ಬಂದಿಗಳು ಹಾಗೂ ಪಂಚಸಾಕ್ಷಿಗಳು ಅಂಗಶೋಧನೆ ಮಾಡಿಕೊಂಡಿರುತ್ತೀರಾ ಎಂದರೆ ಸಾಕ್ಷಿ ಠಾಣೆಯಿಂದ ಹೊರಡುವ ಪೂರ್ವದಲ್ಲಿ ಅಂಗಶೋಧನೆ ಮಾಡಿಕೊಂಡು ಮತ್ತು ಪಂಚನಾಮೆ ಜರುಗಿಸಿ ಸ್ಥಳಕ್ಕೆ ಹೊರಟೆವು ಎನ್ನುತ್ತಾರೆ. ನಾವು ಮತ್ತು ಪಂಚಸಾಕ್ಷಿಗಳು ಹಾಗೂ ಪತ್ರಾಂಕಿತ ಅಧಿಕಾರಿ ಗೌಪ್ಯವಾಗಿ ನಿಂತು ಗಮನಿಸಿದಾಗ ಸ್ಥಳದಲ್ಲಿ ಕೃತ್ಯಕ್ಕೆ ಸಂಬಂಧಿಸಿದ ವಾಹನ ಮಾತ್ರ ಇತ್ತು. ಘಟನಾ ಸ್ಥಳದಲ್ಲಿ ಕೃತ್ಯಕ್ಕೆ ಸಂಬಂಧಿಸಿದ ವಾಹನ ನಿಂತಿದ್ದನ್ನ ನಾನು ಮತ್ತು ದಾಳಿಯಲ್ಲಿ ಭಾಗವಹಿಸಿದ್ದ ನನ್ನ ಸಿಬ್ಬಂದಿಗಳು ಹಾಗೂ ಪಂಚಸಾಕ್ಷಿಗಳು ಸುಮಾರು **100** ಮೀಟರ್ ದೂರದಿಂದ ನೋಡಿದೆವು. ಸ್ಥಳದಲ್ಲಿ ಇದ್ದ **4** ಜನ ಆರೋಪಿತರು ನಮ್ಮನ್ನು ನೋಡಿ ನಮ್ಮ ವಿರುದ್ಧ ದಿಕ್ಕಿಗೆ ಓಡಿ ಹೋದರು.

ಸ್ಥಳದಲ್ಲಿ ಗಿರಾಕಿಗಳು ಇದ್ದುದನ್ನು ಗಮನಿಸಿರುತ್ತೀರಾ ಎಂದರೆ ಸಾಕ್ಷಿ ಗಡಿಬಿಡಿಯಲ್ಲಿ ಅದನ್ನ ಗಮನಿಸಿರುವುದಿಲ್ಲ ಎನ್ನುತ್ತಾರೆ. ನಾನು ಮತ್ತು ಇತರರು ಗೌಪ್ಯವಾಗಿ ಸುಮಾರು 5 ನಿಮಿಷಗಳ ಕಾಲ ಮರೆಯಲ್ಲಿ ನಿಂತು ಕೃತ್ಯವನ್ನ ವೀಕ್ಷಣೆ ಮಾಡಿದೆವು. ನಾವು ಗೌಪ್ಯವಾಗಿ ನಿಂತು ಗಮನಿಸುತ್ತಿದ್ದಾಗ ಯಾರೋ ಗಿರಾಕಿಗಳು ವಾಹನದ ಬಳಿ ಬಂದು ಮಾಲು ಖರೀದಿ ಮಾಡಲು ಪ್ರಯತ್ನಿಸಿಲ್ಲ. ದಾಳಿ ಕಾಲಕ್ಕೆ ತಜ್ಞರನ್ನ ಕರೆದುಕೊಂಡು ಹೋಗಿರಲಿಲ್ಲ, ಸಾಕ್ಷಿ ಮುಂದುವರಿದು ದಾಳಿ ನಂತರ ರಾಸಾಯನಿಕ ಪ್ರಯೋಗಾಲಯಕ್ಕೆ ಮಾಲನ್ನ ಕಳುಹಿಸಿಕೊಡಲಾಗಿದೆ ಎನ್ನುತ್ತಾರೆ. ಗಾಂಜಾ ಮತ್ತು ತಂಬಾಕು ಹೋಲಿಕೆಯಲ್ಲಿ ಒಂದೇ ರೀತಿ ಇರುತ್ತದೆ ಎಂದರೆ ಸರಿಯಲ್ಲ. ಆ ದಿನ ನನಗೆ ಮಾಹಿತಿ ಬಂದಿತ್ತು ಆ ಮೇರೆಗೆ ಪತ್ರಾಂಕಿತ ಅಧಿಕಾರಿ ಮತ್ತು ಪಂಚಸಾಕ್ಷಿಗಳನ್ನ ಬರಮಾಡಿಕೊಂಡೆ ಎಂದು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಪತ್ರಾಂಕಿತ ಅಧಿಕಾರಿ ಮತ್ತು ಪಂಚಸಾಕ್ಷಿಗಳ ಸಮಕ್ಷಮದಲ್ಲಿ ಅಂಗಶೋಧನೆ ಮಾಡಿಕೊಂಡು ಮಹಜರ್ ಕ್ರಮ ಜರುಗಿಸಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಆನಂತರ ನಾನು, ನನ್ನ ಸಿಬ್ಬಂದಿಗಳು, ಪತ್ರಾಂಕಿತ ಅಧಿಕಾರಿ, ಪಂಚಸಾಕ್ಷಿಗಳು ಸ್ಥಳಕ್ಕೆ ಭೇಟಿ ನೀಡಿದೆವು ಎಂದು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಗೌಪ್ಯವಾಗಿ ನಿಂತು ಗಮನಿಸಿದಾಗ ಅಲ್ಲಿ ಒಂದು ವಾಹನ ನಿಂತಿತ್ತು, ಸದರಿ ವಾಹನದ ಬಳಿ ಅಕ್ರಮ ಚಟುವಟಿಕೆ ನಡೆಯುತ್ತಿತ್ತು ಎಂದು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಸ್ಥಳದಿಂದ 4 ಜನ ಆರೋಪಿತರು ಓಡಿ ಹೋದರು ಆನಂತರ ಸ್ಥಳದಲ್ಲಿ ಒಬ್ಬ ಆರೋಪಿಯನ್ನ ಹಿಡಿದಿರುತ್ತೇವೆ ಎಂದು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿ ಮಾಲನ್ನ ಅಮಾನತ್ತುಪಡಿಸಿರುತ್ತೇವೆ ಎಂದು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ

**ಸರಿಯಲ್ಲ. ಮು.ಮಾ.ಗಳಿಗೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.**

**<u>ಪಾಟೀ ಸವಾಲುಃ 1 ಮತ್ತು 5 ನೇ ಆರೋಪಿ ಪರಃ ಶ್ರೀ ಎಸ್.ಆರ್.ಎಂ. ವಕೀಲರಿಂದಃ-</u>**

**ನಾವು ಸ್ಥಳಕ್ಕೆ ಹೋಗಿ ಗೌಪ್ಯವಾಗಿ ವೀಕ್ಷಿಸುವ ಮೊದಲೇ ಘಟನೆಯಲ್ಲಿ ಭಾಗಿಯಾಗಿದ್ದ ಕಾರು ಸ್ಥಳದಲ್ಲಿ ನಿಂತಿತ್ತು. ಹಿಡಿದ ಆರೋಪಿ ಇತರ ಆರೋಪಿತರ ಹೆಸರನ್ನ ಹೇಳಿದ್ದರಿಂದ ಇತರ ಆರೋಪಿತರ ಹೆಸರು ನಮಗೆ ತಿಳಿದಿದೆ ಎಂದರೆ ಸರಿ. ತೂಕದ ಮಾಪನವನ್ನ ಎಲ್ಲಿಂದ ತಂದಿರುತ್ತೀರಾ ಎಂದರೆ ಸಾಕ್ಷಿ ಠಾಣೆಯಿಂದ ತೆಗೆದುಕೊಂಡು ಹೋಗಿರುತ್ತೇವೆ ಎನ್ನುತ್ತಾರೆ. ಸಾಕ್ಷಿ ಮುಂದುವರಿದು ಠಾಣೆಯಲ್ಲಿ ತನಿಖಾ ಕಿಟ್ ಇದ್ದು ಅದರಲ್ಲಿ ತೂಕದ ಮಾಪನ ಸಹ ಇರುತ್ತದೆ ಎನ್ನುತ್ತಾರೆ. ತೂಕದ ಮಾಪನ ಡಿಜಿಟಲ್ ರೂಪದಲ್ಲಿ ಇದೆಯೋ ಅಥವಾ ಹಳೆಯ ಮಾದರಿಯಲ್ಲಿ ಇದೆಯೋ ಎಂದರೆ ಸಾಕ್ಷಿ ಎರೆಡೂ ಮಾಪನಗಳು ಇದ್ದು ಆಧುನಿಕತೆಗೆ ತಕ್ಕಂತೆ ಡಿಜಿಟಲ್ ಮಾಪನವನ್ನ ತನಿಖೆಗೆ ಬಳಸಲಾಗಿದೆ ಎನ್ನುತ್ತಾರೆ. ಹಿಡಿದ ಆಸಾಮಿಯನ್ನ ಯಾರು ಹಿಡಿದರು ಎಂದರೆ ಸಾಕ್ಷಿ ನನ್ನ ಸಿಬ್ಬಂದಿ ಹಿಡಿದರು ಎನ್ನುತ್ತಾರೆ. ನಿರ್ದಿಷ್ಟವಾಗಿ ಆತನನ್ನ ಯಾರು ಹಿಡಿದಿರುತ್ತಾರೆ ಎಂದರೆ ಸಾಕ್ಷಿ ಈಗ ನೆನಪಿಲ್ಲ ಎನ್ನುತ್ತಾರೆ. ಘಟನೆ ನಡೆಯಿತು ಎನ್ನಲಾದ ಸ್ಥಳ ಸಾರ್ವಜನಿಕರು ಓಡಾಡುವ ಸ್ಥಳ ಎಂದರೆ ಸಾಕ್ಷಿ ಎ.ಐ.ಟಿ ಸರ್ಕಲ್ ನ ಪಕ್ಕದಲ್ಲಿ ಬೀಕನಹಳ್ಳಿಗೆ ಹೋಗುವ ರಸ್ತೆ ಇದ್ದು ಘಟನೆ ಕಾಲಕ್ಕೆ ಅಷ್ಟೊಂದು ಸಾರ್ವಜನಿಕರು ಓಡಾಡುತ್ತಿರಲಿಲ್ಲ ಎನ್ನುತ್ತಾರೆ. ಘಟನೆ ನಡೆಯಿತು ಎನ್ನಲಾದ ರಸ್ತೆ ಎ.ಐ.ಟಿ ಕಾಲೇಜಿಗೆ ಹೋಗುವ ರಸ್ತೆ ಎಂದರೆ ಸಾಕ್ಷಿ ಘಟನಾ ಸ್ಥಳ ಎ.ಐ.ಟಿ ಕಾಲೇಜಿನ ಮುಖ್ಯ ದ್ವಾರದ ನಂತರ ಬೀಕನಹಳ್ಳಿಗೆ ಹೋಗುವ ರಸ್ತೆಯಲ್ಲಿ ಇದೆ ಎನ್ನುತ್ತಾರೆ. ಎ.ಐ.ಟಿ ಕಾಲೇಜಿನ ಬಾಯ್ಸ್ ಹಾಸ್ಟೇಲ್ ನಿಂದ ಎಷ್ಟು ದೂರದಲ್ಲಿ ಘಟನಾ ಸ್ಥಳ**

ಇದೆ ಎಂದರೆ ಸಾಕ್ಷಿ ಸದರಿ ಹಾಸ್ಟೇಲ್ ನಿಂದ ಸುಮಾರು 100 ಮೀಟರ್ ದೂರದಲ್ಲಿ ಘಟನಾ ಸ್ಥಳ ಇದೆ ಎನ್ನುತ್ತಾರೆ. ಸಾಕ್ಷಿ ಮುಂದುವರಿದು ಎ.ಐ.ಟಿ ಸರ್ಕಲ್ ನಿಂದ ಮುಂದೆ ಹೋದರೆ ಎ.ಐ.ಟಿ ಕಾಲೇಜಿನ ಪ್ರವೇಶ ದ್ವಾರ ಸಿಗುತ್ತದೆ ಮತ್ತು ಕ್ಯಾಂಪಸ್ ಒಳಗಡೆ ರಸ್ತೆಗೆ ಹೊಂದಿಕೊಂಡಂತೆ ಬಾಯ್ಸ್ ಹಾಸ್ಟೇಲ್ ಇದ್ದು ಪ್ರವೇಶ ದ್ವಾರದ ನಂತರದಲ್ಲಿ ಬೀಕನಹಳ್ಳಿಗೆ ಹೋಗುವ ರಸ್ತೆಯಲ್ಲಿ ಘಟನಾ ಸ್ಥಳ ಇದೆ ಎನ್ನುತ್ತಾರೆ. ಘಟನೆ ನಡೆಯಿತು ಎನ್ನಲಾದ ಸ್ಥಳದಲ್ಲಿ ಹಾಸ್ಟೇಲ್ ವಿದ್ಯಾರ್ಥಿಗಳು ಓಡಾಡುತ್ತಾರೆ ಎಂದರೆ ಸಾಕ್ಷಿ ಕಾಲೇಜಿನ ಪ್ರವೇಶ ದ್ವಾರದಿಂದ ಆ ರಸ್ತೆಗೆ ಬರಬಹುದು ಆದರೆ ಸುತ್ತಾ ಕಾಲೇಜ್ ಕ್ಯಾಂಪಸ್ ಸುತ್ತಾ ಕಾಂಪೌಂಡ್ ಅಳವಡಿಸಲಾಗಿದೆ ಎನ್ನುತ್ತಾರೆ. ಘಟನೆ ನಡೆಯಿತು ಎನ್ನಲಾದ ಕಾಲಕ್ಕೆ ವಿದ್ಯಾರ್ಥಿಗಳಾಗಲೀ ಅಥವಾ ಇತರ ಸಾರ್ವಜನಿಕರು ಇದ್ದರಾ ಎಂದರೆ ಸಾಕ್ಷಿ ಸಾರ್ವಜನಿಕರು ಇಬ್ಬರು ಇದ್ದರು ಅವರಿಗೆ ನೋಟೀಸ್ ಕೊಟ್ಟಿದ್ದೇನೆ ಆದರೆ ವಿದ್ಯಾರ್ಥಿಗಳು ಯಾರೂ ಸ್ಥಳದಲ್ಲಿ ಇರಲಿಲ್ಲ ಎನ್ನುತ್ತಾರೆ. ನೀವು ಹೇಳಲಾದ ಇಬ್ಬರು ಸಾರ್ವಜನಿಕರು ದಾಳಿ ಪೂರ್ವದಲ್ಲಿ ಕಾರ್ ಬಳಿ ಇದ್ದರಾ ಎಂದರೆ ಸಾಕ್ಷಿ ಸದರಿಯವರು ನಾವು ದಾಳಿ ಮಾಡುತ್ತಿದ್ದ ಕಾಲಕ್ಕೆ ಬಂದರು, ಅವರು ದಾಳಿಯನ್ನ ಗಮನಿಸಿದ್ದರಿಂದ ಅವರಿಗೆ ಸಾಕ್ಷಿದಾರರಾಗಿ ಮಾಡಿ ಅವರಿಗೆ ನೋಟೀಸ್ ಜಾರಿ ಮಾಡಲಾಗಿದೆ ಎನ್ನುತ್ತಾರೆ. ಸ್ಥಳದಲ್ಲಿ ಹಾಜರಿದ್ದರು ಎಂದು ಹೇಳಲಾದ ಇಬ್ಬರು ಸಾರ್ವಜನಿಕರಿಗೆ ಅಮಾನತ್ತು ಮಹಜರ್ ಜರುಗಿಸಿದ ನಂತರ ನೋಟೀಸ್ ಜಾರಿ ಮಾಡಿದ್ದೇನೆ. ಗಾಂಜಾ ಪ್ಯಾಕೇಟ್ ಗಳು ಕಾರಿನ ಹಿಂಭಾಗದ ಸೀಟಿನ ಮೇಲೆ ಇದ್ದವು. ಕಾರಿನಲ್ಲಿ ಇದ್ದವು ಎಂದು ಹೇಳಲಾದ ಪ್ಯಾಕೇಟ್ ಗಳು ಕೆಂಪು ಮತ್ತು ಬಿಳಿ ಬಣ್ಣದವು ಆಗಿದ್ದವು. ಮು.ಮಾ.1 ಮತ್ತು 2 ಕ್ಕೂ ಹಾಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಮಾಲಿನಲ್ಲಿ ಕೆಂಪು ಮತ್ತು ಬಿಳಿ ಬಣ್ಣದ ಪ್ಲಾಸ್ಟೀಕ್ ಕವರ್ ಇಲ್ಲ ಎಂದರೆ ಸಾಕ್ಷಿ

ಮಾನ್ಯ ನ್ಯಾಯಾಧೀಶರು ಇನ್ ವೆಂಟರಿ ಮಾಡಿದಾಗ ಸದರಿ ಪ್ಲಾಸ್ಟೀಕ್ ಬ್ಯಾಗುಗಳು ಇದ್ದು ಅವುಗಳನ್ನು ನಂತರದಲ್ಲಿ ಎಫ್.ಎಸ್.ಎಲ್.ಗೆ ಕಳುಹಿಸಲಾಗಿದೆ ಎನ್ನುತ್ತಾರೆ. ನೀವು ಅಮಾನತ್ತುಪಡಿದೆವು ಎಂದು ಹೇಳಲಾದ ಕಾಲಕ್ಕೆ ಮಾಲಿನಲ್ಲಿ ಸೊಪ್ಪು, ಬೀಜ, ಕಾಂಡ ಮತ್ತು ಹೂವು ಇತ್ತಾ ಎಂದರೆ ಸಾಕ್ಷಿ ಅವುಗಳನ್ನೆಲ್ಲಾ ಜಜ್ಜಿ ಪುಡಿ ಮಾಡಿದ್ದರಿಂದ ಅವುಗಳನ್ನ ಪ್ರತ್ಯೇಕ ಮಾಡಲು ಸಾಧ್ಯವಾಗದ ಸ್ಥಿತಿಯಲ್ಲಿ ಇತ್ತು ಎನ್ನುತ್ತಾರೆ. ಅಮಾನತ್ತುಪಡಿಸಿದೆವು ಎಂದು ಹೇಳಲಾದ ಎರೆಡೂ ಕವರ್ ನಲ್ಲಿ ನಾನು ಹೇಳಲಾದ ಸ್ಥಿತಿಯಲ್ಲಿ ಮಾಲು ಇತ್ತು. ಆ ವಿಚಾರವನ್ನ ಮಹಜರ್ ನಲ್ಲಿ ನಮೂದು ಮಾಡಲಾಗಿದೆ. ಮಾಲನ್ನ ತೂಕ ಮಾಡಲಾಯಿತು ಎಂದು ಹೇಳಲಾದ ಕಾಲಕ್ಕೆ ಎಷ್ಟು ಗಂಟೆ ಆಯಿತು ಎಂದರೆ ಸಾಕ್ಷಿ ಸಂಜೆಃ**05.20** ರಿಂದ **06.20** ರವರೆಗೆ ಅಮಾನತ್ತು ಪಂಚನಾಮೆಯನ್ನ ಜರುಗಿಸಲಾಯಿತು ಎನ್ನುತ್ತಾರೆ. ನಾವು ಸ್ಥಳದಲ್ಲಿ ಹಿಡಿದೆವು ಎಂದು ಹೇಳಲಾದ **4** ನೇ ಆರೋಪಿ ಅಮಾನತ್ತುಪಡಿಸಿದ ಮಾಲನ್ನ **1** ಮತ್ತು **5** ನೇ ಆರೋಪಿ ಮನೆಯಿಂದ ತಂದೆವು ಎಂದು ಮಾಹಿತಿ ಕೊಟ್ಟಿದ್ದಾನೆ ಎಂದು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ದಾಳಿ ನಂತರದಲ್ಲಿ **1** ಮತ್ತು **5** ನೇ ಆರೋಪಿತರ ಮನೆಗೆ ಹೋಗಿ ತನಿಖೆ ಮಾಡಿರುತ್ತೀರಾ ಎಂದರೆ ಸಾಕ್ಷಿ ನಾನು ಈ ಪ್ರಕರಣದ ಪ್ರಥಮ ಮಾಹಿತಿದಾರನಾಗಿದ್ದು ತನಿಖಾಧಿಕಾರಿ ಈ ಬಗ್ಗೆ ತನಿಖೆ ನಡೆಸಿದ್ದಾರಾ ಎಂದು ವಿಚಾರಿಸಬೇಕು ಎನ್ನುತ್ತಾರೆ. **1** ಮತ್ತು **5** ನೇ ಆರೋಪಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ, ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. **4** ನೇ ಆರೋಪಿ **1** ಮತ್ತು **5** ನೇ ಆರೋಪಿತರು ಮಾಲನ್ನ ತಂದುಕೊಟ್ಟರು ಎಂದು ಹೇಳಿದ್ದಾರೆ ಎಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

C.C.No.1245/2021
PW-1 CW-1

**ಉಳಿದ ಪಾಟೀ ಸವಾಲನ್ನ 3 ನೇ ಆರೋಪಿ ಪರ ಮಾಡಲಾದ ಪಾಟೀ ಸವಾಲನ್ನ ಅಳವಡಿಸಿಕೊಂಡಿರುತ್ತಾರೆ.**

**ಪಾಟೀ ಸವಾಲುಃ 2 ಮತ್ತು 4 ನೇ ಆರೋಪಿ ಪರಃ ಶ್ರೀ ಕೆ.ಆರ್.ಪಿ ವಕೀಲರಿಂದಃ-**

**3, 1 ಮತ್ತು 5 ನೇ 3 ನೇ ಆರೋಪಿತರ ಪರ ಮಾಡಲಾದ ಪಾಟೀ ಸವಾಲನ್ನ ಅಳವಡಿಸಿಕೊಂಡಿರುತ್ತಾರೆ.**

**ಮರು ಸವಾಲುಃ ಇಲ್ಲಾ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**
ಓಃಹೇಃಕೇಃಸಃಇಃಎಃಒಃ

ಸಹಿ/-
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.**

ಎಸ್ಆರ್ಃ

C.C.No.1245/2021
PW-1 CW-1